ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ., ನ್ಯಾಯಾಲಯ, ಮದ್ದೂರು.

ಸಿ ಸಿ ನಂ. 1741/2015

ಚಾ ಸಾ -1

ಪ್ರಾ ಸಾ -1

| | | |
|---|---|---|
| ಸಾಕ್ಷಿದಾರರ ಹೆಸರು | - | ಸೋಮಶೇಖರ |
| ತಂದೆಯ ಹೆಸರು | - | ರಾಮಚಂದ್ರರಾವ್ |
| ವಯಸ್ಸು | - | 50 ವರ್ಷ |
| ಉದ್ಯೋಗ | - | Senior personnel officer |
| ವಾಸ ಸ್ಥಳ | - | ಬೆಂಗಳೂರು |

ದಿನಾಂಕಃ 03.01.2024 ರಂದು ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ : ಅಭಿಯೋಜನೆಯ ಪರಃ ಎ ಪಿ ಪಿ ಯವರಿಂದ:**

ನಾನು 2011 ರಿಂದ 2019 ರವರೆಗೂ Assistant personnel officer, Bangalore Division, South Western Railways ನಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಮ್ಮ ರೈಲ್ವೆ ಇಲಾಖೆಯಲ್ಲಿ Traffic Department ನ ಡಿ ಗ್ರೂಪ್ ನೌಕರರ ನೇಮಕಾತಿಯು ನನ್ನ ಉಸ್ತುವಾರಿಯಲ್ಲಿ ಅಗುತ್ತದೆ. ದಿ.14.02.2015 ರಂದು ನಾನು Assistant personnel officer ಅಗಿ ಕೆಲಸ ಮಾಡುತ್ತಿದ್ದಾಗ ನನಗೆ ಮದ್ದೂರು station master ರವರಿಂದ 1 ನೇ ಆರೋಪಿಯು points men ಅಗಿ ಕರ್ತವ್ಯಕ್ಕೆ ಹಾಜರಾಗಿರುವ ಬಗ್ಗೆ ಮಾಹಿತಿ ಬಂದಿರುತ್ತದೆ. ಆದರೆ ನಾವು ಇಂತಹ ಯಾವುದೇ ನೇಮಕಾತಿ ಮಾಡದ ಕಾರಣ ಅವರ appointment letter ನ್ನು ಕಳುಹಿಸಿಕೊಡಲು station master ಗೆ ತಿಳಿಸಿರುತ್ತೇನೆ. ಅದರಂತೆ ಸದರಿ station master ರವರು ನನಗೆ ನೇಮಕಾತಿ ಆದೇಶದ ನಕಲನ್ನು ಕಳುಹಿಸಿಕೊಟ್ಟಿದ್ದು, ಅದರಲ್ಲಿ ಸುಮಾರು 8 ಹೆಸರುಗಳು ಇದ್ದು, 1 ನೇ ಆರೋಪಿಯ ಹೆಸರು ಇರುತ್ತದೆ. ಸದರಿ ನೇಮಕಾತಿ ಆದೇಶವು ನಮ್ಮ ಇಲಾಖೆಯಿಂದ ಹೊರಡಿಸಿರುವುದಿಲ್ಲ ಮತ್ತು ನಮ್ಮ ಇಲಾಖೆಯಲ್ಲಿ ಜಿಎಂ ಕೋಟಾ ಸಹ ಇರುವುದಿಲ್ಲ. ಸದರಿ ನೇಮಕಾತಿ ಆದೇಶವನ್ನು ಯಾರೋ ಸೃಷ್ಟಿಮಾಡಿಕೊಂಡಿರುತ್ತಾರೆ ಹಾಗೂ ಆದೇಶದಲ್ಲಿರುವ ಸಹಿ ನನ್ನ ಸಹಿಯಾಗಿರುವುದಿಲ್ಲ. ಈ ಬಗ್ಗೆ ನಾನು ರೈಲ್ವೇ ಪೊಲೀಸರ ಬಳಿ

ನಾನು ಮತ್ತು ಚಾಸಾ-2 ರವರು ಜೊತೆಯಲ್ಲಿ ದೂರನ್ನು ದಾಖಲಿಸಿರುತ್ತೇವೆ.

ಸಾಮಾನ್ಯವಾಗಿ ನಮ್ಮ ಇಲಾಖೆಯಲ್ಲಿ Railway Recruitment commission ಇರುತ್ತದೆ ಸದರಿ commission ನಿಂದಲೇ ಹುದ್ದೆಗಳನ್ನು ಭರ್ತಿ ಮಾಡುತ್ತಾರೆ. ಅಯ್ಕೆಯಾದ ಅಭ್ಯರ್ಥಿಗಳ ಪಟ್ಟಿಯನ್ನು ಹುಬ್ಬಳ್ಳಿಯಲ್ಲಿರುವ ನಮ್ಮ Head quarters ಗೆ ಕಳುಹಿಸಿರುತ್ತಾರೆ. Head quarters ನಿಂದ ಸಂಬಂಧ ಪಟ್ಟ ವಿಭಾಗಗಳಿಗೆ ಕಳುಹಿಸುತ್ತಾರೆ. ನಮ್ಮಲ್ಲಿ 3 ವಿಭಾಗಗಳಿರುತ್ತವೆ, ಅವುಗಳೇಂದರೆ ಹುಬ್ಬಳ್ಳಿ, ಮೈಸೂರು ಮತ್ತು ಬೆಂಗಳೂರು ವಿಭಾಗಗಳು.

ದೂರನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ನಕಲಿ ನೇಮಕಾತಿ ಆದೇಶವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ.ಹೆಚ್ ವಿ ಬಿ ಹಾಗೂ ಅರ್ ಪಿ ವಕೀಲರಿಂದಃ**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ರೂ. 400/- ಗಳ ಖರ್ಚಿನ ಮೇರೆಗೆ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ